

ಮುಂಗಾರಿನ ಸೂಚನೆ ಆರಂಭವಾಗುತ್ತಿದ್ದಂತೆಯೇ ಕರಾವಳಿಯಲ್ಲಿ ಕೃಷಿ ಚಟುವಟಿಕೆಗಳು ಬಿರುಸುಗೊಳ್ಳುತ್ತವೆ. ಚಿತ್ರ: ಗೋವಿಂದರಾಜ ಜವಳಿ

# ಮುಂಗಾರಿನ ಮುನ್ನುಡಿ ಪತ್ತನಾಜೆ

**ತುಳುವರ ವಿಶಿಷ್ಟ ಆಚರಣೆಗಳಲ್ಲೊಂದು 'ಪತ್ತನಾಜೆ'. ಈ ಆಚರಣೆ ಕೃಷಿ ಚಟುವಟಿಕೆಗಳಿಗೆ ಆರಂಭವನ್ನೂ, ಸಾಂಸ್ಕೃತಿಕ–ಧಾರ್ಮಿಕ ಕಾರ್ಯಕ್ರಮಗಳಿಗೆ ವಿರಾಮವನ್ನೂ ನೀಡುತ್ತದೆ.**

**■ ಅಶ್ವಿನಿ ಮೂರ್ತಿ ಅಯ್ಯನಕಟ್ಟೆ**

ನಮ್ಮ ಕರಾವಳಿ ಕೃಷಿ ಪ್ರಧಾನ ಪ್ರದೇಶ. ಹಾಗಾಗಿ ಅಲ್ಲಿನ ಆಚರಣೆಗಳು ಪರಿಸರಕ್ಕೆ ಸಮೀಪವಾದವು; ಆರಾಧನೆಗಳು ಪ್ರಕೃತಿ ಕೇಂದ್ರೀಕೃತವಾದವು. ಬಳಸುವ ವಸ್ತುಗಳೂ ಅಷ್ಟೇ – ತೆಂಗು, ತೆಂಗಿನ ಮಡಲು, ಕಡ್ಡಿ, ಅಡಿಕೆ, ಸಿಂಗಾರ, ಸೊಪ್ಪು, ಬಾಳೆ, ಬಾಳೆದಿಂಡು, ಬಾಳೆ ಎಲೆ, ಅರಿಶಿನ... ಹೀಗೆ ಎಲ್ಲವೂ ನಮ್ಮ ಸುತ್ತಲೂ ಬೆಳೆಯುವಂತಹವೇ. ದೈವ ಧರಿಸುವ ಸಾಂಪ್ರದಾಯಿಕ ಶೈಲಿಯ ಉಡುಗೆಯಲ್ಲಿ, ಮುಖವರ್ಣಿಕೆಗಳಲ್ಲಿ, ವೇಷದ ಸಿಂಗಾರಕ್ಕೆ ಬಳಸುವ ತೆಂಗಿನ ಗರಿ, ಬಾಳೆ ದಿಂಡು ಎಲ್ಲವೂ ಪ್ರಕೃತಿಯ ಕೊಡುಗೆಯೇ. ಜನರ ಆಚರಣೆಗಳೂ ಅಷ್ಟೇ, ನೇರವಾಗಿ ಪ್ರಕೃತಿಗೆ ಸಂಬಂಧಪಟ್ಟಿವೆ. ಅಲ್ಲಿನ ಕೆಡ್ಡಸವಿರಲಿ, ಬಿಸುವಿರಲಿ, ಪತ್ತನಾಜೆಯಿರಲಿ ಎಲ್ಲವೂ ಪ್ರಕೃತಿಗೂ ಮನುಷ್ಯರಿಗೂ ನೇರವಾಗಿ ಸಂಬಂಧಿಸಿವೆ.

ತುಳು ತಿಂಗಳ ಹತ್ತನೆಯ ದಿನ ಪತ್ತನಾಜೆ (ಈ ಬಾರಿ ಮೇ 23ರಂದು). ಈ ಪತ್ತನಾಜೆಯ ದಿನ ಮಳೆಗಾಲ ಆರಂಭ ಎಂಬುದು ಅಲ್ಲಿನವರ ನಂಬಿಕೆ.

ಪತ್ತನಾಜೆ ನಂತರ ಭೂತ ಕೋಲ, ನೇಮ, ತಂಬಿಲ, ಯಕ್ಷಗಾನ, ಜಾತ್ರೆಗಳಿಗೆಲ್ಲ ವಿರಾಮ. ಗದ್ದೆ ಬೇಸಾಯದ ಕೆಲಸಗಳೆಲ್ಲ ಆರಂಭಿಸಲು ಅದು ಸಕಾಲ. ಪತ್ತನಾಜೆಯಾದ ಮೇಲೆ ದೈವ–ಭೂತಗಳೆಲ್ಲಾ ಘಟ್ಟ ಹತ್ತುತ್ತವೆ ಎಂಬುದು ಜನಸಾಮಾನ್ಯರ ನಂಬಿಕೆ. ದೀಪೋತ್ಸವಕ್ಕೆ ಶುರು ಆಗುವ ಮೇಳಗಳ ತಿರುಗಾಟಕ್ಕೆ ಕೂಡ ಪತ್ತನಾಜೆಯಿಂದ ವಿಶ್ರಾಂತಿ. ಊರಿಂದ ಊರಿಗೆ ತಿರುಗಾಡಿ ಸುಸ್ತಾದ ಕಲಾವಿದರ ಪಯಣಕ್ಕೆ ತಾತ್ಕಾಲಿಕ ವಿರಾಮ. ಬೇಸಾಯ, ತೋಟದ ಕೆಲಸಗಳಲ್ಲಿ ಜನರು ತೊಡಗುವುದರಿಂದ ಮನರಂಜನಾ ಕಾರ್ಯಕ್ರಮಗಳು ಹಿನ್ನೆಲೆಗೆ ಸರಿಯುವುದು ಸಹಜವೇ.

ಪತ್ತನಾಜೆಯು ದಕ್ಷಿಣ ಕನ್ನಡ, ಉಡುಪಿ, ಕಾಸರಗೋಡುಗಳಲ್ಲಿ ಆಚರಣೆಯಲ್ಲಿದೆ. ಹಿಂದೆ ಸುಮಾರು ಆರು ತಿಂಗಳ ಕಾಲ ಸತತ ಮಳೆಯಾಗುತ್ತಿದ್ದುದರಿಂದ ಜಾತ್ರೆ, ನೇಮಗಳು, ಯಕ್ಷಗಾನಗಳನ್ನು ಆ ತಿಂಗಳುಗಳಲ್ಲಿ ನಡೆಸುವುದು ಕಷ್ಟಸಾಧ್ಯವಾಗಿತ್ತು. ಹಾಗಾಗಿ, ಪತ್ತನಾಜೆಯನ್ನು ಒಂದು ಗಡುವೆಂದು ಜನರು ಪರಿಗಣಿಸಿರುವ ಸಾಧ್ಯತೆ ಇದೆ. ಪತ್ತನಾಜೆಯನ್ನು ಈಗಲೂ ಕರಾವಳಿಯ ಜನ ಶ್ರದ್ಧೆಯಿಂದ ಆಚರಿಸುತ್ತಾರೆ. ಪ್ರಕೃತಿಯೊಂದಿಗಿನ ಮನುಷ್ಯನ ನಂಟನ್ನು ನೆನಪಿಸಲು, ನವೀಕರಿಸಲು ಇಂಥ ಆಚರಣೆಗಳು ಸಹಾಯಕಾರಿ. ■